ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1131(1534)
ಸದಸ್ಯರ ಹೆಸರು : ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ)
ಉತ್ತರಿಸುವ ಸಚಿವರು : ಶ್ರೀ ಎಂ.ಪಿ.ಪ್ರಕಾಶ್ (ಒಳಾಡಳಿತ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಭಯೋತ್ಪಾದನೆ ಸೇರಿದಂತೆ ವಿವಿಧ ರೀತಿಯ ಸಂಘಟಿತ ಅಪರಾಧ ಕೃತ್ಯಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರೂಪುಗೊಂಡು ಅನುಷ್ಠಾನಕ್ಕೆ ಸಿದ್ದವಾಗಿರುವ "ಕರ್ನಾಟಕ ಸಂಘಟಿತ ಅಪರಾಧಗಳ ತಡೆ ಕಾಯ್ದೆ, 2000" (ಕೋಕಾ ಕಾಯ್ದೆ)ಕ್ಕೆ ಅಧಿಕೃತ ಮುದ್ರೆ ಬೀಳಲು ಎಷ್ಟು ವರ್ಷದಿಂದ ಕಾಯುತ್ತಿದೆ;

ಈ ಕಾಯ್ದೆ ಅಧಿಕೃತವಾಗಿ ದಿನಾಂಕ: 2.1.2002ರಿಂದ ಜಾರಿಗೊಂಡಿರುತ್ತದೆ.

ಆ) ಈ ಕಾಯಿದೆಗೆ ರಾಷ್ಟ್ರಪತಿಗಳ ಅಂಗೀಕಾರವನ್ನು ಯಾವಾಗ ಪಡೆಯಲಾಗಿದೆ;

ಈ ಕಾಯ್ದೆಗೆ ರಾಷ್ಟ್ರಪತಿಗಳ ಅಂಗೀಕಾರವನ್ನು 22.12.2001ರಂದು ಪಡೆಯಲಾಗಿದೆ.

ಇ) ಈ ಕಾಯಿದೆಯ ಜಾರಿಯಿಂದ ಈಗ ದಿನನಿತ್ಯ ನಡೆಯುತ್ತಿರುವ ಅಪರಾಧಗಳನ್ನು ಪೊಲೀಸ್ ಇಲಾಖೆ ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಹಕಾರಿಯಾಗಲಿರುವುದು ಸರ್ಕಾರದ ಗಮನದಲ್ಲಿದೆಯೇ;

ಹೌದು

ಈ) ಈ ಕಾಯಿದೆಗೆ ಸರ್ಕಾರ ಯಾವಾಗ ಅಧಿಕೃತ ಮುದ್ರೆ ನೀಡಲಿದೆ?

ಈ ಕಾಯ್ದೆ ಅಧಿಕೃತವಾಗಿ ದಿನಾಂಕ:2.1.2002ರಿಂದಲೇ ಜಾರಿಗೊಂಡಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1133(1357)
ಸದಸ್ಯರ ಹೆಸರು : ಶ್ರೀ ನರಸಿಂಹ ನಾಯಕ್ (ರಾಜೂಗೌಡ) (ಸುರಪುರ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸುರಪುರ ತಾಲ್ಲೂಕಿನ ಶಾಂತಪುರ ಗ್ರಾಮದಲ್ಲಿ 280 ಕುರಿಗಳು ವಿದ್ಯುತ್ ಸ್ಪರ್ಶದಿಂದ ಮರಣ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು ಗಮನಕ್ಕೆ ಬಂದಿರುತ್ತದೆ. ಈ ಅಪಘಾತಕ್ಕೆ ಸಂಬಂಧಿಸಿದ ವರದಿಯ ಪ್ರಕಾರ 190 ಕುರಿಗಳು, 15 ಟಗರುಗಳು, 20 ಆಡುಗಳು, 8 ಆಡಿನ ಮರಿಗಳು, 1

ಹೋತ, ಹಾಗೂ 7 ನಾಯಿಗಳು ಸೇರಿ ಒಟ್ಟು 241 ಪ್ರಾಣಿಗಳು ಮರಣ ಹೊಂದಿರುತ್ತವೆ.

ಆ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳಲಾಗಿದೆ;

ಈ ಅಪಘಾತಕ್ಕೆ ಸಂಬಂಧಿಸಿದಂತೆ, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ಕ್ರಮಕೈಗೊಂಡು, ಅಪಘಾತದಲ್ಲಿ ಮರಣ ಹೊಂದಿದ ಪ್ರಾಣಿಗಳ ಮಾಲೀಕರುಗಳಿಗೆ ಪರಿಹಾರವನ್ನು ಮಂಜೂರು ಮಾಡಿದೆ. ಪ್ರಾಣಿಗಳ ಮಾಲೀಕರಾದ ಶೋರಾಪುರ ತಾಲ್ಲೂಕು, ಶಾಂತಪುರ ಗ್ರಾಮದ ನಿವಾಸಿಗಳಾದ ಶ್ರೀ ನಿಂಗಪ್ಪ, ಶ್ರೀ ಬಿಸತಪ್ಪ, ಶ್ರೀ ದೊಡ್ಡ ಹಣಮಂತಪ್ಪ, ಶ್ರೀ ಬಸಪ್ಪ, ಶ್ರೀ ಬಸಣ್ಣ, ಶ್ರೀ ಶರಣಪ್ಪ ಮತ್ತು ಶ್ರೀ ಚಿದಾನಂದ ಇವರುಗಳಿಗೆ ದಿನಾಂಕ:15.3.2007 ರಂದು 1,11,200/– (ಒಂದು ಲಕ್ಷ ಹನ್ನೊಂದು ಸಾವಿರದ ಇನ್ನೂರು ರೂ.ಗಳು) ರೂ. ಗಳ ಪರಿಹಾರ ಹಣವನ್ನು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ಮಂಜೂರು ಮಾಡಿರುತ್ತದೆ.

ಇ) ಕರ್ನಾಟಕ ರಾಜ್ಯದಲ್ಲಿ ಯಾವುದೇ ಕುರಿಗಳು ವಿದ್ಯುತ್ ಸ್ಪರ್ಶದಿಂದ ಮರಣ ಹೊಂದಿದರೆ, ರಾಜ್ಯ ಸರ್ಕಾರದಿಂದ ಪ್ರತಿ ಕುರಿಗೆ ಕೊಡುವ ಪರಿಹಾರ ಧನವೆಷ್ಟು?

ರಾಜ್ಯದಲ್ಲಿ ವಿದ್ಯುತ್ ಸ್ಪರ್ಶದಿಂದ ಮರಣ ಹೊಂದಿದ ಕುರಿಗಳಿಗೆ ನೀಡಲಾಗುವ ಪರಿಹಾರ ಧನದ ವಿವರ ಕೆಳಕಂಡಂತಿದೆ:

1. ನಾನ್ ಎಕ್ಸೋಟಿಕ್ ಬ್ರೀಡ್ – ರೂ.300/– ಗಳು
2. ಎಕ್ಸೋಟಿಕ್ ಬ್ರೀಡ್ – ರೂ.500/– ಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1138(1419)
ಸದಸ್ಯರ ಹೆಸರು : ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ಮತಕ್ಷೇತ್ರಕ್ಕೆ ಮಂಜೂರಾದ 110/33 ಹಾಗೂ 33/11 ಕೆ.ವಿ.ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರಗಳೆಷ್ಟು;

ಬಾಗಲಕೋಟೆ ಜಿಲ್ಲೆ ಬೀಳಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಾಲ್ಕು ಹೊಸ 110/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳನ್ನು ಹಾಗೂ ಎರಡು ಹೊಸ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿಯನ್ನು ನೀಡಲಾಗಿರುತ್ತದೆ.,